# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IV A | ಬೆಂಗಳೂರು, ಗುರುವಾರ, ೦೭, ಆಕ್ಟೋಬರ್, ೨೦೨೧(ಆಶ್ವಯುಜ, ೧೫, ಶಕವರ್ಷ, ೧೯೪೩)<br>BENGALURU, THURSDAY, 07, OCTOBER, 2021(ASHWAYUJA, 15, SHAKAVARSHA, 1943) | ನಂ. ೮೧೭<br>No. 817 |
|---|---|---|


## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 18 ಶಾಸನ 2021, ಬೆಂಗಳೂರು, ದಿನಾಂಕ: 07.10.20201**

**ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ವಿಧೇಯಕ**, 2021 ಇದಕ್ಕೆ 2021 ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 34 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## 2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 34

(2021 ರ ಅಕ್ಟೋಬರ್ ತಿಂಗಳ 7ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ಅಧಿನಿಯಮ, 2021

(2021 ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯ ಪಾಲರಿಂದ ಒಪ್ಪಿಗೆಯನ್ನು ಪಡೆಯಲಾಗಿದೆ)

ಬಂದೀಖಾನೆಗಳನ್ನು ಮತ್ತು ಸುಧಾರಣಾ ಆಡಳಿತ ವಿಶೇಷವಾಗಿ ಸುಧಾರಣಾ ಮಧ್ಯಸ್ಥಿಕೆಗಳನ್ನು ಬಲಪಡಿಸುವುದಕ್ಕಾಗಿ, ಬಂದಿಗಳ ಮತ್ತು ಬಂದೀಖಾನೆ ಸಿಬ್ಬಂದಿಗಳ ಕಲ್ಯಾಣಕ್ಕಾಗಿ ಮತ್ತು ಬಂದೀಖಾನೆ ಉದ್ಯಮಗಳ ವಿಸ್ತರಣೆಗಾಗಿ ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿಯನ್ನು ರಚಿಸಲು ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ, ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಬಂದಿಗಳ ಜೀವನ ಸ್ಥಿತಿಗತಿಗಳನ್ನು ಪರಿಶೀಲಿಸಲು ಮತ್ತು ಬಂದಿಗಳು ಸಮಾಜದಲ್ಲಿ ಪುನ: ಸಮ್ಮಿಳಿತಗೊಳ್ಳಲು ಅವರನ್ನು ಸಶಕ್ತಗೊಳಿಸಬಹುದಾದ ಯುಕ್ತ ಸುಧಾರಣಾ ಕಾರ್ಯಕ್ರಮಗಳನ್ನು ರೂಪಿಸುವುದು, ಬಂದೀಖಾನೆ ಉದ್ಯಮಗಳನ್ನು ಅಭಿವೃದ್ಧಿಪಡಿಸಲು ಹಾಗೂ ಬಂದೀಖಾನೆಗಳ ಆಧುನೀಕರಣಕ್ಕಾಗಿ ಮತ್ತು ಬಂದಿಗಳು ಪ್ರೋತ್ಸಾಹಧನವನ್ನು ಗಳಿಸಲು ಅನುವಾಗುವಂತೆ ತಾಂತ್ರಿಕ ಕಾರ್ಯಕ್ರಮಗಳನ್ನು ಒಳಗೊಂಡಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಉದ್ಯೋಗ ಆಧಾರಿತ ಕಾರ್ಯಕ್ರಮಗಳಿಗಾಗಿ ಯೋಜನೆಗಳನ್ನು ರೂಪಿಸಲು ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವುದಕ್ಕಾಗಿ ಮತ್ತು ಅದಕ್ಕೆ ಸಂಬಂಧಿಸಿದ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ;

## ಅಧ್ಯಾಯ I

## ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.- ಈ ಅಧಿನಿಯಮವನ್ನು ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು**.- ಈ ಅಧಿನಿಯಮದಲ್ಲಿ ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಮಂಡಳಿ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ರಚಿಸಲಾದ ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ;

(ಬಿ)"ಕಟ್ಟಡ" ಎಂಬುದು ಕಲ್ಲು, ಇಟ್ಟಿಗೆ, ಮಣ್ಣು, ಮರ, ಲೋಹ, ಸಿಮೆಂಟ್, ಕಾಂಕ್ರೀಟ್ ಅಥವಾ ಯಾವುದೇ ಇತರ ವಸ್ತುವಿನಿಂದ ನಿರ್ಮಿಸಿರುವ ಒಂದು ಮನೆ, ಡಾರ್ಮಿಟರಿ, ಬ್ಯಾರಕ್, ಸೆಲ್, ಶೌಚಾಲಯ, ಉಗ್ರಾಣ, ಕಾರ್ಖಾನೆ ಷೆಡ್, ಗುಡಿಸಲು, ಗೋಡೆ ಅಥವಾ ಯಾವುದೇ ಇತರೆ ರಚನೆಯನ್ನು ಒಳಗೊಳ್ಳುತ್ತದೆ;

(ಸಿ) "ಅಧ್ಯಕ್ಷ" ಎಂದರೆ, ಮಂಡಳಿಯ ಅಧ್ಯಕ್ಷ;

(ಡಿ) "ಆಯುಕ್ತರು" ಎಂದರೆ, ಮಂಡಳಿಯ ಆಯುಕ್ತರು;

(ಇ) "ಸಕ್ಷಮ ಪ್ರಾಧಿಕಾರ" ಎಂದರೆ, ನಿರ್ದಿಷ್ಟ ವಿಷಯದೊಂದಿಗೆ ವ್ಯವಹರಿಸಲು ಅಧಿಕಾರ ವ್ಯಾಪ್ತಿಯನ್ನು ಮತ್ತು ಯುಕ್ತ ಕಾನೂನು ಅಧಿಕಾರದೊಂದಿಗೆ ಸರ್ಕಾರವು ಸಕ್ಷಮ ಪ್ರಾಧಿಕಾರಿಯಾಗಿ ನೇಮಿಸಿದ ಯಾರೇ ಅಧಿಕಾರಿ;

(ಎಫ್) "ನಿಧಿ" ಎಂದರೆ, ಮಂಡಳಿಯ ಬಂದೀಖಾನೆ ಅಭಿವೃದ್ಧಿ ನಿಧಿ;

(ಜಿ) "ಸರ್ಕಾರ" ಎಂದರೆ, ಕರ್ನಾಟಕ ಸರ್ಕಾರ;

(ಎಚ್) "ಭೂಮಿ" ಎಂಬ ಪದವು ಭೂಮಿಯಲ್ಲಿನ ಅಥವಾ ಅದರ ಮೇಲಿನ ಹಕ್ಕುಗಳು ಮತ್ತು ಭೂಮಿಯಿಂದ ಪ್ರಾಪ್ತವಾಗುವ ಪ್ರಯೋಜನಗಳು, ಹಾಗೂ ಕಟ್ಟಡಗಳು, ನಿರ್ಮಿತಿಗಳು ಮತ್ತು ಭೂಮಿಗೆ ಹೊಂದಿಕೊಂಡಿರುವ ಇತರ ವಸ್ತುಗಳು ಅಥವಾ ಭೂಮಿಗೆ ಲಗತ್ತಾದ ಯಾವುದೇ ವಸ್ತುವಿಗೆ ಶಾಶ್ವತವಾಗಿ ಹೊಂದಿಕೊಂಡಿರುವ ಇತರೆ ವಸ್ತುಗಳನ್ನು ಒಳಗೊಳ್ಳುತ್ತವೆ;

(ಐ) "ಸದಸ್ಯ" ಎಂದರೆ, ಮಂಡಳಿಯ ಸದಸ್ಯ;

(ಜೆ) "ಸದಸ್ಯ ಕಾರ್ಯದರ್ಶಿ" ಎಂದರೆ, ಮಂಡಳಿಯ ಸದಸ್ಯ ಕಾರ್ಯದರ್ಶಿ;

(ಕೆ) "ಅಧಿಸೂಚನೆ" ಎಂದರೆ, ಕರ್ನಾಟಕ ಸರ್ಕಾರದ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಮತ್ತು "ಅಧಿಸೂಚಿತ" ಎಂಬ ಪದವನ್ನು ಅದಕ್ಕನುಸಾರವಾಗಿ ಅರ್ಥೈಸತಕ್ಕದ್ದು;

(ಎಲ್) "ನಿಯಮಿಸಲಾದುದು" ಎಂದರೆ, ಸರ್ಕಾರದ ಮೂಲಕ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಮ್) "ಬಂದೀಖಾನೆ" ಎಂದರೆ ಬಂದಿಗಳನ್ನು ತಡೆಹಿಡಿದಿಟ್ಟುಕೊಳ್ಳುವುದಕ್ಕಾಗಿ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೇರೆಗೆ ಖಾಯಂ ಆಗಿ ಅಥವಾ ತಾತ್ಕಾಲಿಕವಾಗಿ ಉಪಯೋಗಿಸುವ ಯಾವುದೇ ಹೆಸರಿನಿಂದ ಕರೆಯಲಾಗುವ ಬಂದೀಖಾನೆ ಅಥವಾ ಜೈಲು ಅಥವಾ ಸ್ಥಳ ಅಥವಾ ಅದಕ್ಕೆ ಲಗತ್ತಾದ ಎಲ್ಲಾ ಭೂಮಿಗಳು ಮತ್ತು ಕಟ್ಟಡಗಳನ್ನು ಒಳಗೊಳ್ಳುತ್ತವೆ ಮತ್ತು ಎಲ್ಲ ಕೇಂದ್ರ ಬಂದೀಖಾನೆ ಅಥವಾ ಜಿಲ್ಲಾ ಬಂದೀಖಾನೆ ಅಥವಾ ತಾಲ್ಲೂಕು ಬಂದೀಖಾನೆ ಅಥವಾ

ಕಂದಾಯ ಬಂದೀಖಾನೆ ಅಥವಾ ತೆರೆದ ಬಂದೀಖಾನೆ ಅಥವಾ ಮಹಿಳಾ ಬಂದೀಖಾನೆ ಅಥವಾ ಸರ್ಕಾರವು ಕಾಲಕಾಲಕ್ಕೆ ಹಾಗೆಂದು ಅಧಿಸೂಚಿಸಿದ ಯಾವುದೇ ಇತರೆ ಬಂದೀಖಾನೆಯನ್ನು ಒಳಗೊಳ್ಳುತ್ತದೆ;

(ಎನ್) "ಅನುಸೂಚಿ" ಎಂದರೆ, ಈ ಅಧಿನಿಯಮಕ್ಕೆ ಅನುಬಂಧಿಸಲಾದ ಅನುಸೂಚಿ; ಮತ್ತು

(ಒ) “ಉಪಾಧ್ಯಕ್ಷ” ಎಂದರೆ, ಮಂಡಳಿಯ ಉಪಾಧ್ಯಕ್ಷ.

## ಅಧ್ಯಾಯ- II
## ಮಂಡಳಿಯ ಸ್ಥಾಪನೆ

**3. ಮಂಡಳಿಯ ರಚನೆ ಮತ್ತು ಸಂರಚನೆ.**- (1) ಈ ಅಧಿನಿಯಮದ ಪ್ರಾರಂಭದ ತರುವಾಯ ಆದಷ್ಟು ಬೇಗನೆ, ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆ ಮೂಲಕ, ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ಎಂದು ಕರೆಯಲಾಗುವ ಒಂದು ಮಂಡಳಿಯನ್ನು ಸ್ಥಾಪಿಸಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಲಾದ ಮಂಡಳಿಯು, ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಶಾಶ್ವತ ಉತ್ತರಾಧಿಕಾರ ಮತ್ತು ಸಾಮಾನ್ಯ ಮೊಹರನ್ನು ಹೊಂದಿರುವ, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನು ಆರ್ಜಿಸುವ, ಧಾರಣ ಮಾಡುವ ಹಾಗೂ ವಿಲೆ ಮಾಡುವ ಮತ್ತು ಕರಾರು ಮಾಡಿಕೊಳ್ಳುವ ಅಧಿಕಾರವನ್ನು ಹೊಂದಿರುವ ಮೇಲೆ ಹೇಳಿದ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಹಾಗೂ ದಾವೆಗೆ ಗುರಿಯಾಗತಕ್ಕದ್ದು.

(3) ಮಂಡಳಿಯು ಬೆಂಗಳೂರಿನಲ್ಲಿ ತನ್ನ ಕೇಂದ್ರ ಸ್ಥಾನವನ್ನು ಹೊಂದಿರತಕ್ಕದ್ದು.

(4) ಮಂಡಳಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

| | | |
|---|---|---|
| (ಎ) | ಬಂದೀಖಾನೆ ಪ್ರಭಾರ ಹೊಂದಿರುವ ಮಂತ್ರಿ | ಅಧ್ಯಕ್ಷರು |
| (ಬಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ | ಉಪಾಧ್ಯಕ್ಷರು |
| (ಸಿ) | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಅಥವಾ ಉಪಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಆತನ ಪ್ರತಿನಿಧಿ | ಪದನಿಮಿತ್ತ ಸದಸ್ಯರು |
| (ಡಿ) | ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾ ನಿರೀಕ್ಷಕರು | ಪದನಿಮಿತ್ತ ಸದಸ್ಯರು |
| (ಇ) | ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ, ಒಳಾಡಳಿತ ಇಲಾಖೆ, (ಪಿಸಿಎಎಸ್) | ಪದನಿಮಿತ್ತ ಸದಸ್ಯರು |
| (ಎಫ್) | ಆಯುಕ್ತರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | ಪದನಿಮಿತ್ತ ಸದಸ್ಯರು |
| (ಜಿ) | ಆರೋಗ್ಯ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ | ಪದನಿಮಿತ್ತ ಸದಸ್ಯರು |
| (ಎಚ್) | ನಿರ್ದೇಶಕರು, ಕೌಶಲ್ಯ ಮಿಷನ್, ಕೌಶಲ್ಯ ಅಭಿವೃದ್ಧಿ | ಪದನಿಮಿತ್ತ ಸದಸ್ಯರು |

| | | |
|---|---|---|
| (ಐ) | ನಿರ್ದೇಶಕರು, ಕೃಷಿ ಇಲಾಖೆ | ಪದನಿಮಿತ್ತ ಸದಸ್ಯರು |
| (ಜೆ) | ನಿರ್ದೇಶಕರು, ತೋಟಗಾರಿಕೆ ಇಲಾಖೆ | ಪದನಿಮಿತ್ತ ಸದಸ್ಯರು |
| (ಕೆ) | ನಿರ್ದೇಶಕರು, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ಇಲಾಖೆ | ಪದನಿಮಿತ್ತ ಸದಸ್ಯರು |
| (ಎಲ್) | ಮಹಾ ನಿರ್ದೇಶಕರು, ಕಾರಾಗೃಹ ಮತ್ತು ಸುಧಾರಣಾ ಸೇವೆಗಳು | ಸದಸ್ಯ ಕಾರ್ಯದರ್ಶಿ |

**4. ಮಂಡಳಿಯ ಸಭೆಗಳಿಗೆ ತಜ್ಞರನ್ನು ಆಹ್ವಾನಿಸುವುದು**:- ಮಂಡಳಿಯು, ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ತನ್ನ ಪ್ರಕಾರ್ಯಗಳ ದಕ್ಷ ನಿರ್ವಹಣೆಗೆ ತಾನು ಅವಶ್ಯವೆಂದು ಪರಿಗಣಿಸಬಹುದಾದ, ಬಂದೀಖಾನೆ ಆಡಳಿತ, ವೈದ್ಯಕೀಯ, ವಾಸ್ತುಶಿಲ್ಪ, ಇಂಜಿನಿಯರಿಂಗ್, ಸಮಾಜ ಕಾರ್ಯ, ಸಮಾಜಶಾಸ್ತ್ರ, ಮನಶಾಸ್ತ್ರ, ಮನೋವಿಜ್ಞಾನ, ಕೈಗಾರಿಕಾ ನಿರ್ವಹಣೆ ಮತ್ತು ಯಾವುದೇ ಇತರ ಸಂಬಂಧಪಟ್ಟ ಕ್ಷೇತ್ರದಲ್ಲಿನ ತಜ್ಞರನ್ನು ವಿಶೇಷ ಆಹ್ವಾನಿತರನ್ನಾಗಿ ತನ್ನ ಸಭೆಗಳಿಗೆ ಆಹ್ವಾನಿಸಬಹುದು.

**5. ಮಂಡಳಿಯ ಸಭೆಗಳು**.-

(1) ಸದಸ್ಯ ಕಾರ್ಯದರ್ಶಿಯು ಅಧ್ಯಕ್ಷರ ಅನುಮೋದನೆ ಪಡೆದು ಮಂಡಳಿಯ ಸಭೆಯನ್ನು ಕರೆಯತಕ್ಕದ್ದು;

(2) ಮಂಡಳಿಯು ಸಾಮಾನ್ಯವಾಗಿ ಅಧ್ಯಕ್ಷರು ತೀರ್ಮಾನಿಸಬಹುದಾಂಥ ಕಾಲದಲ್ಲಿ ಹಾಗೂ ಅಂಥ ಸ್ಥಳದಲ್ಲಿ, ಕನಿಷ್ಠ ಪಕ್ಷ ಪ್ರತಿ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು;

(3) ಅಧ್ಯಕ್ಷನು ತನ್ನ ಗೈರು ಹಾಜರಿಯಲ್ಲಿ ಉಪಾಧ್ಯಕ್ಷನನ್ನು ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಲು ಅಧಿಕೃತಗೊಳಿಸಬಹುದು;

(4) ಕೋರಂ ಒಳಗೊಂಡಂತೆ ಸಭೆಗಳಲ್ಲಿನ ಕಾರ್ಯಕಲಾಪ ನಿರ್ವಹಣೆಗೆ ಸಂಬಂಧಿಸಿದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

**6. ಖಾಲಿ ಸ್ಥಾನ ಮುಂತಾದವು ಮಂಡಳಿಯ ಕಾರ್ಯಗಳನ್ನು ಮತ್ತು ವ್ಯವಹರಣೆಗಳನ್ನು ಅಸಿಂಧುಗೊಳಿಸುವಂತಿಲ್ಲ**:- ಮಂಡಳಿಯ ಯಾವುದೇ ಕಾರ್ಯ ಅಥವಾ ವ್ಯವಹರಣೆಗಳು, ಮಂಡಳಿಯಲ್ಲಿ ಯಾವುದೇ ಖಾಲಿ ಸ್ಥಾನ ಇರುವಿಕೆ ಅಥವಾ ಮಂಡಳಿಯ ರಚನೆಯಲ್ಲಿನ ದೋಷ ಅಥವಾ ಅಧ್ಯಕ್ಷ ಅಥವಾ ಉಪಾಧ್ಯಕ್ಷ ಅಥವಾ ಸದಸ್ಯನಾಗಿ ಕಾರ್ಯನಿರ್ವಹಿಸುವ ವ್ಯಕ್ತಿಯ ನೇಮಕಾತಿಯಲ್ಲಿನ ಯಾವುದೇ ದೋಷದಿಂದ ಮಾತ್ರವೇ ಅಸಿಂಧುವಾಗತಕ್ಕದ್ದಲ್ಲ.

**7. ಸಿಬ್ಬಂದಿಯ ನೇಮಕಾತಿ.-** ಮಂಡಳಿಯು ಈ ಅಧಿನಿಯಮದ ಅಡಿಯಲ್ಲಿ ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯಗೊಳಿಸುವುದಕ್ಕೆ ಅವಶ್ಯಕವಾಗಬಹುದಾದಂಥ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು ನೇಮಕ ಮಾಡಬಹುದು.

ಪರಂತು, ಮಂಡಳಿಯ ಪೂರ್ವಾನುಮೋದನೆ ಇಲ್ಲದೇ ಯಾವುದೇ ಹುದ್ದೆಗಳನ್ನು ಸೃಜಿಸತಕ್ಕದ್ದಲ್ಲ.

**8. ಆಯುಕ್ತರು.-** (1) ಸರ್ಕಾರವು ಬಂದೀಖಾನೆ ಮಹಾ ನಿರ್ದೇಶಕರನ್ನು ಮಂಡಳಿಯ ಆಯುಕ್ತರನ್ನಾಗಿ ನೇಮಿಸತಕ್ಕದ್ದು. ಆಯುಕ್ತರು ಈ ಅಧಿನಿಯಮದ ಅಡಿಯಲ್ಲಿ ಆಡಳಿತ

ನಿರ್ವಹಣೆಗೆ ಸಂಬಂಧಿಸಿದ ಎಲ್ಲಾ ವಿಷಯಗಳಲ್ಲಿ ಮಂಡಳಿಯ ಮುಖ್ಯ ನಿಯಂತ್ರಣಾ ಪ್ರಾಧಿಕಾರಿಯಾಗಿರತಕ್ಕದ್ದು;

(2) ಆಯುಕ್ತರು ಸರ್ಕಾರವು ಕಾಲಕಾಲಕ್ಕೆ ನಿರ್ಧರಿಸಬಹುದಾದಂಥ ವೇತನ ಮತ್ತು ಭತ್ಯೆಗಳನ್ನು ಪಡೆಯತಕ್ಕದ್ದು.

**9. ಮಂಡಳಿಯ ಪ್ರಕಾರ್ಯಗಳು.-** (1) ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ಈ ಮುಂದಿನವುಗಳು ಮಂಡಳಿಯ ಪ್ರಕಾರ್ಯಗಳಾಗಿರತಕ್ಕದ್ದು,-

(ಎ) ಬಂದೀಖಾನೆಗಳಲ್ಲಿ ಬಂದಿಗಳ ಜೀವನ ಸ್ಥಿತಿಯನ್ನು ಪರಿಶೀಲಿಸಿ ಅದನ್ನು ಸುಧಾರಿಸುವ ಮಾರ್ಗಗಳನ್ನು ಸೂಚಿಸುವುದು;

(ಬಿ) ಪೊಲೀಸ್, ನ್ಯಾಯಾಲಯಗಳು ಮತ್ತು ಕಾರಾಗೃಹದಂಥ ಕ್ರಿಮಿನಲ್ ನ್ಯಾಯಿಕ ಏಜೆನ್ಸಿಗಳ ನಡುವೆ ಸಮನ್ವಯವನ್ನು ಸಾಧಿಸುವುದಕ್ಕಾಗಿ ಮಾರ್ಗೋಪಾಯಗಳನ್ನು ಸೂಚಿಸುವುದು;

(ಸಿ) ಬಂದೀಖಾನೆ ಉತ್ಪನ್ನಗಳ ಮಾರುಕಟ್ಟೆಗಾಗಿ ನೀತಿಯನ್ನು ರೂಪಿಸುವುದು ಹಾಗೂ ಸರ್ಕಾರದ ವಿವಿಧ ಇಲಾಖೆಗಳು ಅಥವಾ ಸಂಸ್ಥೆಗಳು ತಮ್ಮ ಕಛೇರಿ ಉಪಯೋಗಕ್ಕಾಗಿ ವಸ್ತುಗಳನ್ನು ಖರೀದಿಸುವಾಗ, ಬಂದೀಖಾನೆ ಉತ್ಪನ್ನಗಳಿಗೆ ಆದ್ಯತೆ ನೀಡುವಂತೆ ನೋಡಿಕೊಳ್ಳುವುದು;

(ಡಿ) ಕೇಂದ್ರ, ರಾಜ್ಯ ಸರ್ಕಾರ ಮತ್ತು ಇತರೆ ಸಂಘ ಸಂಸ್ಥೆಗಳ ವಿವಿಧ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳು, ವೃತ್ತಿಪರ ತರಬೇತಿ ಕಾರ್ಯಕ್ರಮಗಳು, ಕಲ್ಯಾಣ ಕಾರ್ಯಕ್ರಮಗಳು ಮತ್ತು ಇತರ ಕಾರ್ಯಕ್ರಮಗಳನ್ನು ಯೋಜಿಸುವುದು, ಅನುಷ್ಠಾನಗೊಳಿಸುವುದು, ಮೌಲ್ಯಮಾಪನ ಮಾಡುವುದು ಮತ್ತು ಸಮನ್ವಯಗೊಳಿಸುವುದು;

(ಇ) ವ್ಯವಹಾರ ಮತ್ತು ವಾಣಿಜ್ಯ ಆಧಾರದ ಮೇಲೆ ಬಂದೀಖಾನೆ ಉದ್ಯಮಗಳನ್ನು ಸಂಘಟಿಸಲು ಹೊಸ ರಾಜಸ್ವ ಸೃಜನೆ ಮಾರ್ಗೋಪಾಯಗಳನ್ನು ಗುರುತಿಸುವ ಹಾಗೂ ಖಚಿತಪಡಿಸಿಕೊಳ್ಳುವ ನೀತಿಯೊಂದನ್ನು ಸಿದ್ಧಪಡಿಸಿ, ಮಂಡಿಸುವುದು;

(ಎಫ್) ಬಂದೀಖಾನೆ ಮತ್ತು ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೌಶಲ್ಯಗಳು ಮತ್ತು ಕಾರ್ಯಕ್ಷಮತೆಯನ್ನು ಸುಧಾರಿಸುವುದು ಹಾಗೂ ಬಂದೀಖಾನೆ ಇಲಾಖೆ ಮತ್ತು ಸುಧಾರಣಾ ಸೇವೆಗಳ ಮತ್ತು ಮಂಡಳಿಯ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕಲ್ಯಾಣವನ್ನು ಖಚಿತಪಡಿಸುವುದು;

(ಜಿ) ಬಂದಿಗಳನ್ನು ಸಶಕ್ತಗೊಳಿಸುವ ಪರಿಸರವನ್ನು ಒದಗಿಸುವುದು ಮತ್ತು ಬಂಧಿಗಳು ತಮ್ಮ ಬಿಡುಗಡೆಯ ತರುವಾಯ ಕಾನೂನು ಅನುವರ್ತಿತ ನಾಗರಿಕರಾಗಿ ಸುಸ್ಥಿರ ಮತ್ತು ಸಾರ್ಥಕ ಜೀವನವನ್ನು ನಡೆಸುವುದಕ್ಕೆ ಅವರನ್ನು ಸಮರ್ಥಗೊಳಿಸಬಹುದಾದಂಥ ಮಾರ್ಗದಲ್ಲಿ ಅವರಿಗೆ ನೆರವಾಗುವುದು;

(ಹೆಚ್) ಗಣಕಯಂತ್ರಗಳು, ಸಂಪರ್ಕ ಸೌಲಭ್ಯಗಳು, ಗ್ಯಾಡ್ಜೆಟ್‌ಗಳು, ವಾಹನಗಳು, ಭದ್ರತೆ ಅಥವಾ ಕಣ್ಗಾವಲು ಪರಿಕರ, ವಿಡಿಯೋ ಕಾನ್ಫರೆನ್ಸ್ ಆಧಾರಿತ ಅಧಿವಿಚಾರಣಾ ಸೌಲಭ್ಯ ಇತ್ಯಾದಿಗಳನ್ನು ಒಳಗೊಂಡಂತೆ ಅವಶ್ಯವಿದ್ದಲ್ಲಿ ಸ್ಥಿರ ಅಥವಾ ಚರ ಸ್ವತ್ತುಗಳನ್ನು ಸ್ವಾಧೀನ ಪಡಿಸಿಕೊಳ್ಳುವ ಮೂಲಕ ಬಂದೀಖಾನೆಗಳ ಸಮರ್ಥ ನಿರ್ವಹಣೆಗಾಗಿ ಸಂಪನ್ಮೂಲಗಳನ್ನು ಮೇಲ್ದರ್ಜೆಗೇರಿಸುವುದು;

(ಐ) ಬಂದಿಗಳಿಗೆ ಸೂಕ್ತ ಸುಧಾರಣಾ ಉಪಚಾರವನ್ನು ನೀಡುವುದರ ಮೂಲಕ ಅವರನ್ನು ಸುಧಾರಿಸುವುದು ಮತ್ತು ಸಾಮಾಜಿಕ ಪರಿಸರದಲ್ಲಿ ಒಟ್ಟಾಗಿ ಬಾಳುವಂತೆ ಮಾಡುವುದು;.

(ಜೆ) ಶಿಕ್ಷಣ, ವೃತ್ತಿಪರ ಅಥವಾ ಕೌಶಲ್ಯ ತರಬೇತಿ, ಉತ್ಪಾದನಾ ಚಟುವಟಿಕೆಗಳು, ಕೃಷಿ, ಕೋಳಿಸಾಕಾಣೆ, ಹೈನುಗಾರಿಕೆ ಅಥವಾ ಮೀನು ಸಾಕಾಣೆ, ತೋಟಗಾರಿಕೆ ಹಾಗೂ ಬಂದಿಗಳ ಅಭ್ಯುದಯಕ್ಕೆ ಸಹಾಯಕವಾಗುವಂಥ ಇತರೆ ವೃತ್ತಿಪರ, ವಾಣಿಜ್ಯ, ಕೈಗಾರಿಕೆ, ಕ್ರೀಡೆ ಮತ್ತು ಕಲ್ಯಾಣ

ಚಟುವಟಿಕೆಗಳನ್ನು ಒಳಗೊಂಡಂತೆ ಆದರೆ ಅಷ್ಟಕ್ಕೆ ಸೀಮಿತವಾಗದೆ ಬಂಧಿಗಳ ಅಭ್ಯುದಯಕ್ಕಾಗಿ ಕಾರ್ಯಕ್ರಮಗಳು ಮತ್ತು ಯೋಜನೆಯನ್ನು ಕೈಗೊಳ್ಳುವುದು;

(2) ಮಂಡಳಿಯು ತನಗೆ ವಹಿಸಿದ ಕರ್ತವ್ಯಗಳ ಸಮರ್ಥ ನಿರ್ವಹಣೆಗಾಗಿ ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ಮಾಡಿದ ನಿಯಮಗಳ ಮೇರೆಗೆ ಪ್ರದತ್ತವಾದ ಅಂಥ ಅಧಿಕಾರಗಳನ್ನು ಚಲಾಯಿಸುವುದು ಮತ್ತು ವಿಧಿಸಿದ ಅಂಥ ಪ್ರಕಾರ್ಯಗಳನ್ನು ನೆರವೇರಿಸುವುದು.

## ಅಧ್ಯಾಯ – III

## ಮಂಡಳಿಯ ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

**10. ಬಂದೀಖಾನೆ ಅಭಿವೃದ್ಧಿ ನಿಧಿ.-** (1) ಮಂಡಳಿಯು, "ಬಂದೀಖಾನೆಗಳ ಅಭಿವೃದ್ಧಿ ನಿಧಿ" ಎಂಬ ಹೆಸರಿನ ತನ್ನದೇ ಸ್ವಂತ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು, ಅದಕ್ಕೆ ಈ ಮುಂದಿನದನ್ನು ಜಮೆ ಮಾಡತಕ್ಕದ್ದು, ಎಂದರೆ:-

(ಎ) ಅನುದಾನಗಳು, ಸಾಲಗಳು, ಮುಂಗಡಗಳು ಅಥವಾ ಅನ್ಯಥಾ ರೂಪದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಮಂಡಳಿಯು ಸ್ವೀಕರಿಸುವ ಎಲ್ಲಾ ಹಣ;

(ಬಿ) ಸಾಲಗಳು ಅಥವಾ ಡಿಬೆಂಚರುಗಳ ರೂಪದಲ್ಲಿ ಮಂಡಳಿಯು ಸಾಲ ಪಡೆಯುವ ಎಲ್ಲಾ ಹಣ;

(ಸಿ) ಬಂದೀಖಾನೆಗಳಲ್ಲಿ ಬಂದಿಗಳು ಕೈಗೊಳ್ಳುವ ಕೃಷಿ, ತೋಟಗಾರಿಕೆ, ಕೈಗಾರಿಕೆ ಅಥವಾ ಉತ್ಪಾದನಾ ಚಟುವಟಿಕೆಗಳ ಮೂಲಕ ಉತ್ಪತ್ತಿಯಾಗುವ ಎಲ್ಲಾ ಹಣ;

(ಡಿ) ಕೈಗೊಂಡ ಯಾವುದೇ ಗುತ್ತಿಗೆ ಅಥವಾ ವಾಣಿಜ್ಯ ಚಟುವಟಿಕೆಗಳಿಂದ ಮಂಡಳಿಯು ಸ್ವೀಕರಿಸಿದ ಎಲ್ಲಾ ಶುಲ್ಕಗಳು, ಚಾರ್ಜುಗಳು, ಬ್ಯಾಂಕು ಬಡ್ಡಿಗಳು, ಠೇವಣಿಗಳು ಮತ್ತು ಲಾಭಗಳು;

(ಇ) ಭೂಮಿ, ಕಟ್ಟಡಗಳು ಮತ್ತು ಇತರ ಸ್ವತ್ತುಗಳ (ಚರ ಅಥವಾ ಸ್ಥಿರ) ವಿಲೆಯ ಮೂಲಕ ಮಂಡಳಿಯು ಸ್ವೀಕರಿಸುವ ಎಲ್ಲಾ ಹಣ;

(ಎಫ್) ಅನುಮೋದಿತವಾದ ಸರ್ಕಾರೇತರ ಸಂಘ ಸಂಸ್ಥೆಗಳು, ನೋಂದಾಯಿತ ದತ್ತಿ ಸಂಸ್ಥೆಗಳು ಅಥವಾ ನಿಕಾಯಗಳಿಂದ ದೇಣಿಗೆ ರೂಪದಲ್ಲಿ ಹಾಗೂ ಕಂಪನಿಗಳಿಂದ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಗಳಿಂದ(ಸಿಎಸ್‌ಆರ್) ಮಂಡಳಿಯು ಸ್ವೀಕರಿಸುವ ಎಲ್ಲಾ ಹಣ;

(ಜಿ) ಕ್ಯಾಂಟೀನ್‌ಗಳು ಅಥವಾ ದಿನಸಿ ಅಂಗಡಿಗಳು ಅಥವಾ ಬಂದೀಖಾನೆ ಅಥವಾ ಬಂದೀಖಾನೆಯ ಆವರಣದಲ್ಲಿ ಅಥವಾ ಯಾವುದೇ ಇತರ ರೀತಿಯಲ್ಲಿ ವಾಣಿಜ್ಯ ವ್ಯವಹಾರಗಳನ್ನು ನಡೆಸುವುದರಿಂದ ಬರುವ ಲಾಭಗಳ ರೂಪದಲ್ಲಿ ಮಂಡಳಿಯು ಸ್ವೀಕರಿಸುವ ಎಲ್ಲಾ ಹಣ;

(ಹೆಚ್) ಕರ್ನಾಟಕ ಬಿಡುಗಡೆಗೊಂಡ ಬಂದಿಗಳ ನೆರವು ಸೊಸೈಟಿಯಿಂದ ಮಂಡಳಿಯು ಸ್ವೀಕರಿಸಿದ ಎಲ್ಲಾ ಹಣ.

(ಐ) ಬಾಡಿಗೆ ಅಥವಾ ಯಾವುದೇ ಇತರ ಮೂಲದ ರೂಪದಲ್ಲಿ ಮಂಡಳಿಯು ಸ್ವೀಕರಿಸುವ ಎಲ್ಲಾ ಹಣ.

(2) ಈ ಅಧಿನಿಯಮದ ಅಡಿಯಲ್ಲಿ ಮಂಡಳಿಯು ತನ್ನ ಪ್ರಕಾರ್ಯಗಳ ನಿರ್ವಹಣೆಗಾಗಿ ಮತ್ತು ನಿಯಮಿಸಬಹುದಾಂಥ ಇತರ ಉದ್ದೇಶಕ್ಕಾಗಿ ಮಾಡಿದ ವೆಚ್ಚವನ್ನು ಭರಿಸುವುದಕ್ಕಾಗಿ ಈ ನಿಧಿಯನ್ನು ವಿನಿಯೋಗಿಸತಕ್ಕದ್ದು;

(3) ಮಂಡಳಿಯು, ತನ್ನ ನಿಧಿಯಲ್ಲಿನ ಸ್ವಲ್ಪ ಮೊತ್ತವನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಠೇವಣಿ ಇಡಬಹುದು ಮತ್ತು ಸದರಿ ಮೊತ್ತಕ್ಕೆ ಹೆಚ್ಚುವರಿಯಾದ ಯಾವುದೇ ಹಣವನ್ನು ನಿಯಮಿಸಬಹುದಾದಂಥ ರೀತಿಯಲ್ಲಿ ಹೂಡಿಕೆ ಮಾಡಬಹುದು.

**11. ಸಾಲ ಪಡೆಯಲು ಮಂಡಳಿಯ ಅಧಿಕಾರ.-** ಮಂಡಳಿಯು, ಕಾಲಕಾಲಕ್ಕೆ, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಈ ಅಧಿನಿಯಮದ ಉದ್ದೇಶಗಳಿಗಾಗಿ ಅಗತ್ಯವಾದ ಯಾವುದೇ ಮೊತ್ತವನ್ನು ಸಾಲವಾಗಿ ಪಡೆಯಬಹುದು.

**12. ಸರ್ಕಾರದಿಂದ ಅನುದಾನಗಳು, ಮುಂಗಡಗಳು ಮತ್ತು ಸಾಲಗಳು.-** ಸರ್ಕಾರವು, ಈ ಅಧಿನಿಯಮದ ಅಡಿಯಲ್ಲಿ ಮಂಡಳಿಯ ಪ್ರಕಾರ್ಯಗಳ ನಿರ್ವಹಣೆಗಾಗಿ ತಾನು ಅವಶ್ಯವೆಂದು ಭಾವಿಸಬಹುದಾದಂತೆ ಅಂಥ ಅನುದಾನಗಳು, ಮುಂಗಡಗಳು ಮತ್ತು ಸಾಲಗಳನ್ನು ಮಂಡಳಿಗೆ ನೀಡಬಹುದು, ಹಾಗೂ ನೀಡಲಾದ ಎಲ್ಲಾ ಅನುದಾನಗಳು, ಸಾಲಗಳು ಅಥವಾ ಮುಂಗಡಗಳನ್ನು ಸರ್ಕಾರವು ನಿರ್ಧರಿಸಬಹುದಾದ ಅಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇರೆಗೆ ಇರತಕ್ಕದ್ದು.

**13. ಅಧಿಕಾರಗಳ ಪ್ರತ್ಯಾಯೋಜನೆ**.- ಮಂಡಳಿಯು ನಿರ್ಣಯದ ಮೂಲಕ, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಅದಕ್ಕೆ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು ಆಯುಕ್ತರಿಗೆ ಪ್ರತ್ಯಾಯೋಜಿಸಬಹುದು.

**14. ಆಯವ್ಯಯ ಮತ್ತು ವಾರ್ಷಿಕ ವರದಿ.-** (1) ಮಂಡಳಿಯು ಪ್ರತಿ ವರ್ಷ ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ನಮೂನೆಯಲ್ಲಿ ಆಯವ್ಯಯವನ್ನು ಸಿದ್ಧಪಡಿಸತಕ್ಕದ್ದು. ಹಿಂದಿನ ವರ್ಷದ ಅದರ ಚಟುವಟಿಕೆಗಳ ನೈಜ ಹಾಗೂ ನ್ಯಾಯೋಚಿತ ಲೆಕ್ಕಪತ್ರವನ್ನು ನೀಡುವ ತನ್ನ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು, ಮತ್ತು ಸದರಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(2) ಮಂಡಳಿಯು, ಸರ್ಕಾರವು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ವಿವರ ಪಟ್ಟಿಕೆಯನ್ನು ಅಥವಾ ತನ್ನ ಚಟುವಟಿಕೆಗಳಿಗೆ ಸಂಬಂಧಿಸಿದ ಇತರ ಮಾಹಿತಿಯನ್ನು ಸರ್ಕಾರಕ್ಕೆ ಒದಗಿಸತಕ್ಕದ್ದು.

**15. ಲೆಕ್ಕಪತ್ರ ಮತ್ತು ಲೆಕ್ಕಪರಿಶೋಧನೆ**.- (1) ಮಂಡಳಿಯು ಸರಿಯಾದ ಲೆಕ್ಕಪತ್ರಗಳು ಮತ್ತು ಇತರೆ ಸಂಬಂಧಿತ ದಾಖಲೆಗಳನ್ನು ನಿರ್ವಹಿಸತಕ್ಕದ್ದು ಹಾಗೂ ನಿಯಮಿಸಬಹುದಾದಂಥ ನಮೂನೆಯಲ್ಲಿ ವಾರ್ಷಿಕ ಲೆಕ್ಕಪತ್ರಗಳ ವಿವರಪಟ್ಟಿಯನ್ನು ಸಿದ್ಧಪಡಿಸತಕ್ಕದ್ದು.

(2) ಮಂಡಳಿಯ ಆರ್ಥಿಕ ವರ್ಷವು ಸರ್ಕಾರವು ಅನುಸರಿಸುವ ಆರ್ಥಿಕ ವರ್ಷವಾಗಿರತಕ್ಕದ್ದು;

(3) ಮಂಡಳಿಯ ಲೆಕ್ಕಪತ್ರಗಳು ಪ್ರತಿ ಆರ್ಥಿಕ ವರ್ಷದ ಮುಕ್ತಾಯದ ತರುವಾಯ ಮಹಾಲೇಖಪಾಲರ ಕಛೇರಿಯ ವಾರ್ಷಿಕ ಲೆಕ್ಕ ಪರಿಶೋಧನೆಗೆ ಒಳಪಡಿಸತಕ್ಕದ್ದು ಹಾಗೂ ಅಂಥ ಲೆಕ್ಕಪರಿಶೋದನೆಗೆ ಸಂಬಂಧಿಸಿದಂತೆ ತಗಲುವ ಯಾವುದೇ ವೆಚ್ಚವನ್ನು ಮಂಡಳಿಯು ಪಾವತಿಸತಕ್ಕದ್ದು;

(4) ಲೆಕ್ಕಪರಿಶೋಧನಾ ವರದಿಯನ್ನು ಅದರ ಅನುಪಾಲನೆಯೊಂದಿಗೆ ಪ್ರತಿ ವರ್ಷ ವಾರ್ಷಿಕವಾಗಿ ಸರ್ಕಾರಕ್ಕೆ ಕಳುಹಿಸತಕ್ಕದ್ದು, ಅದನ್ನು ರಾಜ್ಯ ವಿಧಾನಮಂಡಲದ ಪ್ರತಿ ಸದನದ ಮುಂದೆ ಮಂಡಿಸತಕ್ಕದ್ದು.

## ಅಧ್ಯಾಯ – IV

## ಭೂಮಿ ಮತ್ತು ಕಟ್ಟಡಗಳ ಸ್ವಾಧೀನ, ನಿರ್ವಹಣೆ ಮತ್ತು ವಿಲೇವಾರಿ

**16. ಬಂದೀಖಾನೆ ಜಮೀನು ಮತ್ತು ಕಟ್ಟಡವನ್ನು ಮಂಡಳಿಯಲ್ಲಿ ನಿಹಿತಗೊಳಿಸುವುದು**.- ಈ ಅಧಿನಿಯಮದ ಪ್ರಾರಂಭದ ದಿನಾಂಕದಂದು ಮತ್ತು ದಿನಾಂಕದಿಂದ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದವುಗಳನ್ನು ಹೊರತುಪಡಿಸಿ ಕರ್ನಾಟಕ ಸರ್ಕಾರದ ಕರ್ನಾಟಕ ಬಂದೀಖಾನೆ ಮತ್ತು ಸುಧಾರಣಾ ಸೇವೆಗಳ ಇಲಾಖೆಯ ಪ್ರಭಾರದ ಅಥವಾ ಸ್ವಾಧೀನ ಅಥವಾ ಉಪಯೋಗದಲ್ಲಿರುವ ಎಲ್ಲಾ ಜಮೀನು ಮತ್ತು ಅದಕ್ಕೆ ಲಗತ್ತಾದ ಕಟ್ಟಡವು ಮಂಡಳಿಯಲ್ಲಿ ನಿಹಿತಗೊಳ್ಳತಕ್ಕದ್ದು ಹಾಗೂ ಅದರ ನಿಯಂತ್ರಣಕ್ಕೆ ಒಳಪಟ್ಟಿರತಕ್ಕದ್ದು.

**17. ಭೂಮಿಯ ಸ್ವಾಧೀನ**.- (1) ಮಂಡಳಿಯ ಅಭಿಪ್ರಾಯದಲ್ಲಿ ತನ್ನ ಯಾವುದೇ ಕಾರ್ಯಚಟುವಟಿಕೆಗಳಿಗಾಗಿ ಯಾವುದೇ ಭೂಮಿಯನ್ನು ಸ್ವಾದೀನಪಡಿಸಿಕೊಳ್ಳುವುದು ಅಗತ್ಯವಾಗಿದ್ದರೆ ಮಂಡಳಿಯು ಸರ್ಕಾರಕ್ಕೆ ಅಥವಾ ಸಕ್ಷಮ ಪ್ರಾಧಿಕಾರಕ್ಕೆ ಅಂಥಹ ಜಮೀನು ಸ್ವಾದೀನಕ್ಕಾಗಿ ಭೂ ಸ್ವಾದೀನ, ಪುನರ್ವಸತಿ ಮತ್ತು ಪುನರ್ವ್ಯವಸ್ಥೆಯಲ್ಲಿ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆ ಹಕ್ಕು ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ ಸಂಖ್ಯೆ 30) ಉಪಬಂಧಗಳ ಅಡಿಯಲ್ಲಿ ಮನವಿ ಮಾಡಬಹುದು;

(2) ಮಂಡಳಿಯು ಕರ್ನಾಟಕ ಸರ್ಕಾರಕ್ಕೆ ಅಥವಾ ಖಾಸಗಿ ವ್ಯಕ್ತಿಗೆ ಸೇರಿರುವ ಯಾವುದೇ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಪಟ್ಟರೆ, ಅದು ಸಂಬಂಧಪಟ್ಟ ಜಿಲ್ಲಾಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರಿಯು ನಿಗದಿಪಡಿಸುವ ಮಾರುಕಟ್ಟೆ ಮೌಲ್ಯವನ್ನು ಸಂದಾಯ ಮಾಡುವ ಮೂಲಕ ಸ್ವಾಧೀನಪಡಿಸಿಕೊಳ್ಳಬಹುದು;

(3) (2)ನೇ ಉಪ ಪ್ರಕರಣದಡಿಯಲ್ಲಿ ಜಿಲ್ಲಾಧಿಕಾರಿ ಅಥವಾ ಸಕ್ಷಮ ಪ್ರಾಧಿಕಾರದ ಶಿಫಾರಸ್ಸುಗಳೊಂದಿಗೆ ಅಸಮ್ಮತಿಯ ಸಂದರ್ಭದಲ್ಲಿ ಮಂಡಳಿಯು ತನ್ನ ಅನಿಸಿಕೆಗಳೊಂದಿಗೆ ಸರ್ಕಾರಕ್ಕೆ ಇದನ್ನು ಉಲ್ಲೇಖಿಸಬಹುದು. ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**18. ಮಂಡಳಿಯ ಮೂಲಕ ಜಮೀನು, ಕಟ್ಟಡಗಳು ಮುಂತಾದವುಗಳ ವಿಲೇವಾರಿ**.- (1) ಮಂಡಳಿಯು ಈ ಬಗ್ಗೆ ಮಾಡಬಹುದಾದಂಥ ನಿಯಮಗಳಿಗೆ ಒಳಪಟ್ಟು;

(ಎ) ಅದರ ಸ್ವಾಧೀನದಲ್ಲಿರುವ ಯಾವುದೇ ಜಮೀನು ಅಥವಾ ಕಟ್ಟಡ ಅಥವಾ ಚರ ಅಥವಾ ಸ್ಥಿರ ಸ್ವತ್ತನ್ನು; ಮತ್ತು

(ಬಿ) ಯಾವುದೇ ಬಂದೀಖಾನೆಯನ್ನು ತೆರವುಗೊಳಿಸಿದ ಪರಿಣಾಮ ಯಾವುದೇ ಇತರ ಜಮೀನು ಅಥವಾ ಕಟ್ಟಡ ಅಥವಾ ಚರ ಅಥವಾ ಸ್ಥಿರ ಸ್ವತ್ತನ್ನು,

-ಉಳಿಸಿಕೊಳ್ಳಬಹುದು, ಗುತ್ತಿಗೆ ನೀಡಬಹುದು, ಮಾರಾಟ ಮಾಡಬಹುದು, ಬದಲಾವಣೆ ಮಾಡಿಕೊಳ್ಳಬಹುದು ಅಥವಾ ಅನ್ಯಥಾ ವಿಲೇವಾರಿ ಮಾಡಬಹುದು:

ಪರಂತು, ಮಂಡಳಿಯು ಸರ್ಕಾರದ ಪೂರ್ವಾನುಮೋದನೆ ಇಲ್ಲದೆ (ಎ) ಮತ್ತು (ಬಿ) ಖಂಡಗಳ ಅಡಿಯಲ್ಲಿ ಸ್ಥಿರ ಸ್ವತ್ತನ್ನು ವಿಲೇವಾರಿ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಜಮೀನು ಅಥವಾ ಕಟ್ಟಡ ಅಥವಾ ಆಸ್ತಿಯ ವಿಲೇವಾರಿ ಅಥವಾ ಅನ್ಯಥಾ ಮೂಲಕ ಪಡೆಯಲಾದ ಪ್ರತಿಫಲ ಅಥವಾ ಆದಾಯವನ್ನು " ಬಂದೀಖಾನೆ ಅಭಿವೃದ್ಧಿ ನಿಧಿ"ಗೆ ಜಮೆ ಮಾಡತಕ್ಕದ್ದು.

## ಅಧ್ಯಾಯ – V
## ಸಂಕೀರ್ಣ

**19. ನಿಯಮಗಳ ರಚನಾಧಿಕಾರ**.- (1) ಸರ್ಕಾರವು, ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯ ನಂತರ ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಸರ್ಕಾರವು ಈ ಅಧಿನಿಯಮದ ಅಧಿಸೂಚನೆಯ 6 ತಿಂಗಳುಗಳ ಒಳಗಾಗಿ ನಿಯಮಗಳನ್ನು ರಚಿಸತಕ್ಕದ್ದು.

(3) ವಿಶೇಷವಾಗಿ ಮತ್ತು ಈ ಹಿಂದಿನ ಅಧಿಕಾರಗಳ ಸಾಮಾನ್ಯತೆಗೆ ಬಾಧಕವಾಗದಂತೆ ಈ ಮುಂದಿನ ಎಲ್ಲಾ ಅಥವಾ ಯಾವುದೇ ವಿಷಯಗಳಿಗೆ ಅಂಥ ನಿಯಮಗಳನ್ನು ಉಪಬಂಧಿಸಬಹುದು, ಎಂದರೆ:-

(i) 4ನೇ ಪ್ರಕರಣದ ಅಡಿಯಲ್ಲಿ ತಜ್ಞರನ್ನು ಆಹ್ವಾನಿಸುವುದಕ್ಕೆ ಸಂಬಂಧಿಸಿದ ನಿಬಂಧನೆಗಳು ಮತ್ತು ಷರತ್ತುಗಳು;

(ii) 5ನೇ ಪ್ರಕರಣದ (iv)ನೇ ಉಪಪ್ರಕರಣದ ಅಡಿಯಲ್ಲಿ ಸಭೆಯ ಕೋರಂ ಮತ್ತು ಕಾರ್ಯವಿಧಾನ;

(iii) 7ನೇ ಪ್ರಕರಣದ ಅಡಿಯಲ್ಲಿ ಮಂಡಳಿಯ ಅಧಿಕಾರಿಗಳ ಮತ್ತು ನೌಕರರ ನೇಮಕಾತಿಯ ವಿಧಾನ ಮತ್ತು ಸೇವಾ ಷರತ್ತುಗಳು;

(iv) 10ನೇ ಪ್ರಕರಣದ (2)ನೇ ಉಪಪ್ರಕರಣದ ಅಡಿಯಲ್ಲಿ ಯಾವ ಉದ್ದೇಶಗಳಿಗಾಗಿ ಬಂದೀಖಾನೆ ಅಭಿವೃದ್ಧಿ ಮಂಡಳಿಯ ನಿಧಿಯನ್ನು ಬಳಸತಕ್ಕ ಉದ್ದೇಶಗಳು;

(v) 10ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಹೆಚ್ಚುವರಿ ಮೊತ್ತದ ಹೂಡಿಕೆಯ ವಿಧಾನ;

(vi) 11ನೇ ಪ್ರಕರಣದ ಅಡಿಯಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ ಮಂಡಳಿಯು ಅಗತ್ಯಪಡಿಸುವ ಯಾವುದೇ ಮೊತ್ತವನ್ನು ಸಾಲ ಪಡೆಯಲು ಷರತ್ತುಗಳು;

(vii) 14ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಆಯವ್ಯಯದ ರೀತಿ ಮತ್ತು ವಿಧಾನ;

(viii) 15ನೇ ಪ್ರಕರಣದ (1)ನೇ ಉಪಪ್ರಕರಣದ ಅಡಿಯಲ್ಲಿ ಮಂಡಳಿಯ ಲೆಕ್ಕಪತ್ರದ ವಾರ್ಷಿಕ ವಿವರಪಟ್ಟಿಯ ನಮೂನೆ ಮತ್ತು ವಿಧಾನ;

(ix) ಅಧಿನಿಯಮ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ನಿಯಮಗಳನ್ನು ರಚಿಸುವುದು.

(4)ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ, ಆದಷ್ಟು ಬೇಗನೆ, ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಅದು ಅಧಿವೇಶನದಲ್ಲಿರುವಾಗ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ನಿರಂತರ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮೊದಲು ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಲು ಒಪ್ಪಿದರೆ ಅಥವಾ ಆ ನಿಯಮವನ್ನು ರಚಿಸತಕ್ಕದ್ದಲ್ಲವೆಂದು ಒಪ್ಪಿದರೆ, ತದನಂತರ ಅಂಥ ನಿಯಮವು ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರವಾಗಿ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಆ ನಿಯಮದ ಅಡಿಯಲ್ಲಿ ಈ ಮೊದಲು ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧಕವನ್ನು ಉಂಟುಮಾಡತಕ್ಕದ್ದಲ್ಲ.

**20. ಕೆಲವು ವ್ಯಕ್ತಿಗಳು ಸಾರ್ವಜನಿಕ ನೌಕರರಾಗಿರುವುದು.-** ಮಂಡಳಿಯ ಎಲ್ಲ ಸದಸ್ಯರು, ಅಧಿಕಾರಿಗಳು ಮತ್ತು ನೌಕರರನ್ನು, ಅವರು ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮ ವಿನಿಯಮದ ಉಪಬಂಧಗಳ ಅನುಸಾರವಾಗಿ ಕಾರ್ಯನಿರ್ವಹಿಸುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾದಾಗ ಅವರನ್ನು ಭಾರತ ದಂಡ ಸಂಹಿತೆ, 1860ರ (1860ರ ಕೇಂದ್ರ ಅಧಿನಿಯಮ ಸಂಖ್ಯೆ.45) 21ನೇ ಪ್ರಕರಣ ಮತ್ತು ಭ್ರಷ್ಟಾಚಾರ ಪ್ರತಿಬಂಧಕ ಅಧಿನಿಯಮ, 1988ರ (1988ರ ಕೇಂದ್ರ ಅಧಿನಿಯಮ 49) ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರು ಎಂದು ಭಾವಿಸತಕ್ಕದ್ದು.

**21. ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಕೈಗೊಂಡ ಕ್ರಮದ ಸಂರಕ್ಷಣೆ.-** ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲಾಗಿದೆ ಎಂದು ತಾತ್ಪರ್ಯವಾಗುವ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಇತರೆ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**22. ಸರ್ಕಾರದ ಸಾಮಾನ್ಯ ಆಡಳಿತಾತ್ಮಕ ನಿಯಂತ್ರಣ**.- ಪ್ರಾಧಿಕಾರದ ಎಲ್ಲ ಕಾರ್ಯಚಟುವಟಿಕೆಗಳು ಮತ್ತು ವ್ಯವಹಾರಗಳ ಮೇಲೆ ಸರ್ಕಾರವು ಸಾಮಾನ್ಯ ಆಡಳಿತಾತ್ಮಕ ನಿಯಂತ್ರಣ ಮತ್ತು ಪರಿವೀಕ್ಷಣೆಯನ್ನು ಹೊಂದಿರತಕ್ಕದ್ದು.

**23. ಅಧ್ಯಾರೋಹಿ ಪರಿಣಾಮಗಳು**;- ಈ ಅಧಿನಿಯಮದ ಅಡಿಯಲ್ಲಿ ಹಾಗೆ ರಚಿಸಲಾದ ಮಂಡಳಿಯು ಬಂದೀಖಾನೆ ಉದ್ಯಮಗಳು, ಬಂದಿಗಳು ಮತ್ತು ಬಂದೀಖಾನೆ ಸಿಬ್ಬಂದಿಗಾಗಿ ಕಲ್ಯಾಣ ಕಾರ್ಯಕ್ರಮಗಳು ಮತ್ತು ಈ ಅಧಿನಿಯಮದ ಅಡಿಯಲ್ಲಿ ನಮೂದಿಸಿದ ಇತರ ಸಂಬಂಧಿತ ಚಟುವಟಿಕೆಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ಈ ಮುಂಚೆ ಹೊರಡಿಸಲಾದ ಯಾವುದೇ ಇತರ ನಿಯಮಗಳು ಅಥವಾ ಆದೇಶಗಳು ಅಥವಾ ಸೂಚನೆಗಳ ಮೇಲೆ ಅಧ್ಯಾರೋಹಿ ಪರಿಣಾಮವನ್ನು ಹೊಂದಿರತಕ್ಕದ್ದು.

**24. ಕರ್ನಾಟಕ ಬಿಡುಗಡೆಗೊಂಡ ಬಂಧಿಗಳ ನೆರವು ನೀಡುವ ಸೊಸೈಟಿ ಮತ್ತು ಯಾವುದೇ ಇತರ ಸೊಸೈಟಿಯನ್ನು ಸಮಾಪನಗೊಳಿಸುವುದು.-** ಕರ್ನಾಟಕ ಬಿಡುಗಡೆಗೊಂಡ ಬಂದಿಗಳ ನೆರವು ನೀಡುವ ಸೊಸೈಟಿ ಅಥವಾ ರಾಜ್ಯದಲ್ಲಿನ ಯಾವುದೇ ಬಂದೀಖಾನೆಯಲ್ಲಿ ನಡೆಸುತ್ತಿರುವಂಥ ಯಾವುದೇ ಇತರೆ ಅಂಥ ಸಂಘಗಳನ್ನು ಕಾನೂನಿನ ಯುಕ್ತ ಪ್ರಕ್ರಿಯೆಯ ಮೂಲಕ ಸಮಾಪನಗೊಳಿಸತಕ್ಕದ್ದು ಮತ್ತು ಸದರಿ ಸಂಸ್ಥೆಯು ಕೈಗೊಂಡ ಕಾರ್ಯಚಟುವಟಿಕೆಗಳು ಮತ್ತು ಸಂಸ್ಥೆಯ ಎಲ್ಲಾ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಮಂಡಳಿಯಲ್ಲಿ ವಿಲೀನಗೊಳಿಸತಕ್ಕದ್ದು.

**25. ಅನುಸೂಚಿಯನ್ನು ತಿದ್ದುಪಡಿ ಮಾಡುವ ಅಧಿಕಾರ.-** (1) ಸರ್ಕಾರವು, ಅಧಿಸೂಚನೆಯ ಮೂಲಕ, ಅನುಸೂಚಿಯ ಯಾವುವೇ ನಮೂದುಗಳನ್ನು ಸೇರಿಸಬಹುದು, ತಿದ್ದುಪಡಿ ಮಾಡಬಹುದು ಅಥವಾ ಬಿಟ್ಟುಬಿಡಬಹುದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಿದ ಪ್ರತಿಯೊಂದು ಅಧಿಸೂಚನೆಯನ್ನು ವಿಧಾನಮಂಡಲದ ಉಭಯಸದನಗಳ ಮುಂದೆ ಮಂಡಿಸತಕ್ಕದ್ದು.

**26. ನಿರ್ದೇಶನಗಳನ್ನು ನೀಡುವುದಕ್ಕೆ ಸರ್ಕಾರದ ಅಧಿಕಾರ.-** ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಅವಶ್ಯಕ ಮತ್ತು ವಿಹಿತವೆಂದು ಅಭಿಪ್ರಾಯ ಪಟ್ಟಲ್ಲಿ ಅದು ಅಂಥ ನಿರ್ದೇಶನಗಳನ್ನು ಮಂಡಳಿಗೆ ನೀಡಬಹುದು ಮತ್ತು ಅದ್ಯಕ್ಷರ ಗಮನಕ್ಕೆ ತಂದ ತರುವಾಯ ಅಂಥ ನಿರ್ದೇಶನಗಳನ್ನು ಪಾಲಿಸುವುದು ಮಂಡಳಿಯ ಕರ್ತವ್ಯವಾಗಿರತಕ್ಕದ್ದು.

**27. ತೊಂದರೆ ನಿವಾರಣೆಯ ಅಧಿಕಾರ**.- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೆ ತರುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಸರ್ಕಾರವು ಅಧಿಸೂಚನೆಯ ಮೂಲಕ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ಅವಶ್ಯಕ ಅಥವಾ ವಿಹಿತವೆಂದು ಅದಕ್ಕೆ ಕಂಡುಬರುವಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಅಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳ ಮುಕ್ತಾಯದ ತರುವಾಯ ಯಾವುದೇ ಅಂಥ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಲಾದ ಎಲ್ಲಾ ಆದೇಶಗಳನ್ನು ಅವುಗಳನ್ನು ಮಾಡಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದ್ದು.

**ಅನುಸೂಚಿ**

**[2(ಎನ್) ಪ್ರಕರಣವನ್ನು ಹಾಗೂ 25ನೇ ಪ್ರಕರಣವನ್ನು ನೋಡಿ]**

(i) ಪ್ರತ್ಯೇಕವಾಗಿ ಪೊಲೀಸರ ಅಭಿರಕ್ಷೆಯಲ್ಲಿರುವ ಕೈದಿಗಳನ್ನು ಬಂಧನದಲ್ಲಿರಿಸಿರುವ ಯಾವುದೇ ಸ್ಥಳ;

(ii) ಸರ್ಕಾರವು, ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ವಿಶೇಷವಾಗಿ ಗೊತ್ತುಪಡಿಸಿದ ಯಾವುದೇ ಸ್ಥಳ;

-ಈ ಸ್ವತ್ತುಗಳು ಮಂಡಳಿಯಲ್ಲಿ ನಿಹಿತವಾಗಿರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

## PARLIAMENTARY AFFAIRS AND LEGISLATION SECRETARIAT
## NOTIFICATION
## NO.DPAL 18 SHASHANA 2021, BENGALURU, DATED:07.10.2021

ಭಾರತ ಸಂವಿಧಾನದ ಅನುಚ್ಛೇಧ 348ರ ಖಂಡ (3)ರ ಅಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ **ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ಅಧಿನಿಯಮ**, 2021 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 34) ರ ಭಾಷಾಂತರವನ್ನು ಅಧಿಕೃತ ಆಂಗ್ಲ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ (ಭಾಗ IV-A) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

KARNATAKA ACT NO. 34 OF 2021

(First Published in the Karnataka Gazette Extra-ordinary on the 7th day of October, 2021)

**THE KARNATAKA PRISON DEVELOPMENT BOARD ACT, 2021**
**(Received the assent of the Governor on the 5th day of October, 2021)**

An Act to provide for the constitution of the 'Karnataka Prison Development Board' for strengthening of Prisons and Correctional administration particularly Correctional interventions, welfare of Prisoners and Prisons Staff and expanding Prison industries, and for matters connected therewith or incidental thereto.

Whereas, it is expedient to provide for the establishment the Karnataka Prison Development Board to examine the living conditions of prisoners and to contemplate the appropriate correctional programs which can enable the prisoners to re-assimilate in the society, to develop the Prison industries and formulate plan for modernization of Prisons and job oriented programmes including technical programs in different areas and trades to earn the incentives and for matters connected therewith or incidental thereto.

Be it enacted by the Karnataka State Legislature in the seventy second year of the Republic of India, as follows:-

## CHAPTER-I
## PRELIMINARY

**1. Short title and commencement.-**(1) This Act may be called the Karnataka Prison Development Board Act, 2021.

(2) It shall come into force on such date as the Government may, by notification, appoint.

**2. Definitions.-**In this Act, unless the context otherwise requires,-

(a) "Board" means the Karnataka Prison Development Board constituted under section 3;

(b) "Building" includes a house, dormitory, barrack, cell, latrine, godown, factory shed, hut, wall or any other structure whether of masonry, bricks, mud, wood, metal, cement, concrete or any other material whatsoever;

(c) "Chairperson" means the chairperson of the Board;

(d) "Commissioner" means commissioner of the Board;

(e) "competent Authority" means any officer appointed as such by the Government having jurisdiction and with due legal authority to deal with a particular matter;

(f) "Fund" means Prison Development fund of the Board;

(g) "Government" means the Government of Karnataka;

(h) "Land" includes rights in or over land and benefits to arise out of land, and buildings, structures and other things attached to the earth or permanently fastened to anything attached to earth;

(i) 'Member' means member of the Board;

(j) 'Member Secretary' means member secretary of the Board;

(k) "Notification" means a notification published in the official Gazette of Government of Karnataka and the word "notified" shall be construed accordingly;

(l) "prescribed" means prescribed by rules by the Government;

(m) "Prison" means any prison or jail or place by whatever name called, including all lands and buildings, appurtenant thereto, used permanently or temporarily under the general or special order of the State Government for the detention of prisoners and includes all Central Prison or District Prison or Taluka Prison or Revenue Prison or Open Prison or Women Prison or any other Prison so notified by the Government from time to time;

(n) "Schedule" means schedule appended to this Act.

(o) "Vice-Chairperson" means Vice-Chairperson of the Board.

## CHAPTER – II

## ESTABLISHMENT OF THE BOARD

**3. Constitution and composition of the Board.-** (1) As soon as may be, after the commencement of this Act, the Government may, by notification in the Official Gazette establish a Board to be called the Karnataka Prison Development Board.

(2) The Board constituted under sub section(1) shall be a body corporate by the name aforesaid having perpetual succession and a common seal, with power, subject to the provisions of this Act to acquire, hold and dispose of property, both movable and immovable, and to contract and shall by the said name sue and be sued.

(3) The Board shall have its Head Quarters at Bengaluru.

(4) The Board shall consist of the following members, namely:-

| | | |
|---|---|---|
| (a) | Minister in-charge of Prison | Chairperson |
| (b) | The Additional Chief Secretary, Home Department | Vice Chairperson |
| (c) | The Additional Chief Secretary, Finance Department or his representative not below the rank of Deputy Secretary | Ex-officio Member |
| (d) | Director General and Inspector General of Police | Ex-officio Member |
| (e) | The Principal Secretary or Secretary to Government, Home Department (P C A S) | Ex-officio Member |
| (f) | The Commissioner, Industries and Commerce Department | Ex-officio Member |
| (g) | The Health Commissioner, Health and Family Welfare Services Department. | Ex-officio Member |
| (h) | The Director, Skill Mission, Skill Development | Ex-officio Member |
| (i) | The Director, Department of Agriculture | Ex-officio Member |
| (j) | The Director, Department of Horticulture | Ex-officio Member |

| | | |
|---|---|---|
| (k) | The Director, Department Animal Husbandry and Veterinary service | Ex-officio Member |
| (l) | The Director General, Prisons and Correctional Services | Member- Secretary |

**4. Inviting experts to the meetings of the Board:**The Board may, from time to time, invite experts in the fields of Prison Administration, Medicine, Architecture, Engineering, Social Work, Sociology, Psychology, psychiatry, Industrial Management and any other relevant field to be special invitees to the meetings of the Board as it may consider necessary for the efficient performance of its functions on such terms and conditions as may be prescribed.

**5. Meetings of the Board:-**

(1) The meetings of the Board shall be convened by the MemberSecretary with the approval of the Chairperson.

(2) The Board shall ordinarily meet at such time and place as the Chairperson may decide, provided that at-least once in every three months;

(3) The Chairperson may authorize the Vice-Chairperson to preside over the meeting of Board in absence;

(4) The procedure in regard to transaction of business at the meetings including the Quorum shall be such as may be prescribed;

**6. Vacancy etc. not to invalidate the acts and proceedings of the Board.-** No act or proceedings of the Board shall be invalid on the ground merely of the existence of the any vacancy in, or defect in the constitution of Board or any defect in the appointment of a person acting as the Chairperson or the Vice-Chairperson or Member;

**7. Appointment of staff.-**The Board may appoint such officers and employees as may be required to enable the Board to carry-out its functions under this Act, in such a manner subject to such conditions as may be prescribed.

provided no post shall be created without prior approval of the Board.

**8. The Commissioner.-**(1) The Government shall appoint Director General of Prison as the commissioner of the Board. The commissioner shall be the Chief Controlling Authority of the Board in all matters connected with the administration of this Act.

(2) The commissioner shall receive such salary and allowances as Government may from time to time determine.

**9. Functions of the Board.-**(1)Subject to the provisions of this Act, the functions of the Board shall be,-

(a) to examine the living conditions of the prisoners in the prisons and ways to improve the same;

(b) to suggest ways and means for improving co-ordination between the Criminal Justice Agencies like police, courts and prison;

(c) to frame a policy for marketing of prison products; to give preference to prison products, while purchasing articles for the office use, by the various Government Departments or Organizations;

(d) to plan, implement, evaluate and co-ordinate various skill development programs, vocational training programs, welfare programs and other programs of the Central, State Government and other Organizations;

(e) to prepare policy to be laid down and to organize Prison industries on business cum commercial basis; to identify and ensure new means of revenue generations;

(f) to improve the skills and competency of the Prison Officers and employees and that of the Board as well as to ensure the welfare of the Officers and employees of the Department of Prison and Correctional Services and Board;

(g) to provide an enabling environment to the prisoners and help them in such a way so that they may be able to lead a sustainable and productive life as law-abiding citizens after their release;

(h) to upgrade the resources for efficient management of Prisons, and wherever required, by way of acquisition of assets, whether movable or immovable, including computers, communication facilities, gadgets, vehicles, security or surveillance equipment, video-conferencing based trial facilities etc;

(i) to reform and re-assimilate prisoners in the social milieu by giving them appropriate correctional treatment; and

(j) to undertake programmes and scheme for betterment of prisoners, including but not limited to, education, vocational or skill training manufacturing activities, agriculture, poultry, dairy or fish farming, horticulture and such other occupational, commercial, industrial, sports and welfare activities which help in development of prisons;

(2) For the efficient discharge of the duties entrusted to it, the Board shall exercise such powers and perform such functions as are conferred, or imposed under this Act or the ruled made there under.

## CHAPTER – III

## FINANCE OF THE BOARD'S, ACCOUNTS AND AUDIT

**10. Prison development fund.-**(1) The Board shall have and maintain its own fund in the name and Style of 'Prisons Development Fund' to which shall be credited;-

(a) all moneys received by the Board from the Central and State Governments, by way of grants, loans, advances or otherwise;

(b) all moneys borrowed by the Board by way of loans or debentures;

(c) all moneys generated by the agricultural, horticultural, industrial or manufacturing activities undertaken by the prisoners in Prisons;

(d) all fees, charges, bank interests, deposits and profits received by the Board from any leasing or commercial activities carried out;

(e) all moneys received by the Board after disposal of lands, buildings, and other properties. (movable or immovable);

(f) all moneys received by the Board by way of donations from approved Non Government Organizations, Registered Charitable Institutions or bodies, Corporate Social Responsibility (CSR) funds from the companies;

(g) all money received by the Board by way of profits by running of Canteens or Provision Stores or any other commercial business activities in the Prison and Prison premises or any other means.

(h) all money received by the Board from Karnataka discharged Prisoners Aid Society: and,

(i) all moneys received by the board by way of rent or any other source;

(2) The Fund shall be applied towards meeting the expenses incurred by the Board in the administration of this Act, and for such other purpose, as may be prescribed.

(3) The Board may keep such sum of money out of its funds in deposit in any of the nationalized banks, and any money in excess of said sum shall be invested in such manner as may be prescribed.

**11. Power of the Board to borrow.-**The Board may, from time to time, subject to such conditions as may be prescribed borrow any sum required for the purposes of this Act.

**12. Grants, advances and loans from Government.-**The Government may, make such grants, advances and loans to the Board as the Government may deem

necessary for the performance of the functions of the Board under this Act, and all grants, loans or advances made shall be on such terms and conditions as the Government may determine.

**13. Delegation of Powers.-**The Board may by resolution delegate any of the powers conferred on it by or under this Act to the Commissioner.

**14. Budget and Annual Report.-**(1)The Board shall prepare Budget every year in such manner and in such form as may be prescribed, its annual report giving a true and fare account of its activities during the previous year and submit the said report to the Government.

(2)The Board shall furnish to the Government such returns or other information with respect to its activities as the Government may, from time to time, require.

**15. Accounts and Audit.-**(1) The Board shall maintain proper accounts and other relevant records, and prepare an Annual Statement of accounts in such form as may be prescribed.

(2) The financial year of the Board shall be same as the financial year followed by the State Government.

(3) The accounts of the Board shall be subject to the annual audit by the Accountant General Office, after the close of each financial year and any expenditure incurred in connection with such audit shall be payable by the Board.

(4) Audit report along with compliance thereupon shall be forwarded annually to the Government,Which shall be laid before each house of the State Legislative.

**CHAPTER – IV**

**ACQUISITION, MAINTENANCE AND DISPOSAL OF LANDS AND BUILDINGS**

**16. Vesting of Prison lands and building in the Board.-**On and from the date of commencement of this Act, all land and building appurtenant thereto in the charge or possession or use of the Prisons and Correctional Service Department of the Government of Karnataka other than specified in the schedule shall vest in the Board and be subject to its control.

**17. Acquisition of Land.-**(1) If, in the opinion of the Board, any land is required to be acquired for any activities of the Board, the Board may request the

Government or competent authority to acquire such land under the provisions of the Right to fair compensation and Transparency in Land Acquisition, Rehabilitation and Resettlement Act, 2013 (Central Act No.30 of 2013).

(2) Where in the opinion of the Board, there is suitable land belonging to a Government of Karnataka or a Private individual, it may acquire said land by way of payment of market value, as fixed by the concerned Deputy Commissioner or competent authority.

(3) The Board may, in case of disagreement with the recommendations of the Deputy Commissioner or Competent authority under sub-sections (2), refer the same, along with its views, to the Government, whose decision shall be final.

**18. Disposal of land, buildings etc., by the Board.-**(1) The Board may, subject to such rules as may be made in this behalf retain, lease, sell, exchange or otherwise dispose of;

(a) any land or building or property whether movable or immovable in its possession; and

(b) any other land or building or property whether movable or immovable consequent upon decommissioning of any Prison.

Provided that Board shall not dispose off immovable property under clause (a) and (b) without prior approval of the Government.

(2) The consideration or proceeds obtained by disposal or otherwise of a land or building or property under sub-section (1) shall be credited to the "Prison Development Fund"

**CHAPTER – V**

**MISCELLANEOUS**

**19. Power to make rules.-**(1) The Government may, by notification and after previous publication make rules for carrying out all, or any of the purposes of this Act.

(2) Government shall make rules within six months of notification of this Act.

(3) In particular, and without prejudice to the generality of the foregoing power, such rules may provide for all or any of the following matters, namely:-

(i) regarding the terms and conditions of inviting experts, under section 4;

(ii) regarding the quorum and procedure of the meeting, under sub-section (iv) of section 5;

(iii) regarding method of recruitment and condition of service of officers and employees of the Board, under section 7;

(iv) regarding the purposes for which the Prison Development Fund shall be used, under sub-section (2) of section 10;

(v) the manner of investing the excess money, under sub-section (3) of section 10;

(vi) regarding conditions of borrowing any sum required by the Board for the purposes of this Act, under section 11;

(vii) the manner and form of Budget, under sub-section (1) of section 14;

(viii) the form and manner of Annul Statement of accounts of the Board, under sub-section (1) of section 15; and

(ix) to make rules, to carry out the purposes of the Act.

(4) Every rule made by the Government under this Act shall be laid as soon as may be after it is made, before each House of the State Legislature, while it is in session for a total period of thirty days which may be comprised in one session or in two or more successive sessions, and it, before the expiry of the session immediately following the session or the successive sessions aforesaid, both Houses agree in making any modification in the rule or both Houses agree that the rule should not be made the rule shall thereafter have effect only in such modified form or be of no effect, as the case may be, so however, that any such modification or annulment shall be without prejudice to the validity of anything previously done under that rule.

**20. Certain persons to be public Servants.-**All members, officers and employees of the Board while acting or purporting to act in pursuance of the provisions of this Act or any rule or regulation made there under, shall be deemed to be public servants within the meaning of section 21 of the Indian Penal Code, 1860 (Central Act No.45 of 1860)and the Prevention of Corruption Act, 1988. (Central Act 49 of 1988)

**21. Protection of action taken under this Act.-**No suit, prosecution or other legal proceeding shall lie against any person for anything which is in good faith done or purported to be done under this Act.

**22. General administrative control by the Government.-**(1) The Government shall have general administrative control and supervision over all the activities and affairs of the Board.

**23.Overriding effects.-**The Board so constituted under this Act shall have overriding effect on any other rules or orders or instructions issued earlier relating to functioning of Prison industries, welfare programmers for prisoners and prison staff, and other related activities as mentioned in this Act.

**24. Winding of the Karnataka Discharged Prisoners Aid Society or any other society.-**The society running in the name of 'Karnataka discharged Prisoners Aid Society' or any other such societies running in any Prison in the State Shall be wound up by the due process of law, and the activities undertaken by the said society and all assests and liabilities of the society shall be subsumed in the Board.

**25. Power to amend the Schedule.-**(1) The Government may by notification insert, amend or omit any of the entries of the schedule.

(2) Every notification issued under sub-section (1) shall be laid before both house of the legislature.

**26. Power of the Government to give directions.-**The Government may give such directions to the Board as in its opinion are necessary or expedient for carrying out the purpose of this Act and it shall be the duty of the Board, to comply with such directions after bringing to the notice of the Chairman.

**27. Power to remove difficulty.-**(1) If any difficulty arises in giving effect to the provisions of this Act, the Government may by notification, make such provisions not inconsistent with the provisions of this Act as appear to it to be necessary or expedient for removing the difficulty.

Provided that, no such notification shall be issued after the expiry of two years from the date of commencement of this Act.

(2) All orders made under this section, shall as soon as may be after it is made, be laid before both houses of the State legislature.

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



## SCHEDULE

(see sec 2(n) and Section 25)

The properties which do not vest in the Board are,-

(i) any place for the confinement of prisoners who are exclusively in the custody of the police;

(ii) any place specially appointed by the Government under the Code of Criminal Procedure;

The above translation of **ಕರ್ನಾಟಕ ಬಂದೀಖಾನೆ ಅಭಿವೃದ್ಧಿ ಮಂಡಳಿ ಅಧಿನಿಯಮ, 2021 (2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 34)** be published in the official Gazette under clause (3) of Article 348 of the constitution of India.

**THAAWARCHAND GEHLOT**
**GOVERNOR OF KARANATAKA**

By Order and in the name of
the Governor of Karnataka,

**G.SRIDHAR**
Secretary to Government
Department of Parliamentary
Affairs and Legislation

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

SUNIL GARDE Digitally signed by SUNIL GARDE Date: 2021.10.07 18:14:56 +05'30'